43. Vishwaguru Basavanna Education Society., Craft Tailoring Centre Navadgeri, Tq.Bidar.

44. Basavareddy Technical Institute A.P.MC.Yard., Mruthunjaya Market Dharwad

45. Catse Computer Education Shivaganga Buildings Sapthapur, Haliyal Road Dharwad

46. Sri Baghavendra G.Katti M.D.MAA. Computer Academy, Palanker Building., Gandhichowk, Bharwad.

47. Indian Overseas Bank Palace Road., Bangalore.

ಸರ್ಕಾರಿ ಆಸ್ಪತ್ರೆಯ ಕಟ್ಟಡ

466 (972) ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕಾರ್ಕಳ ಸರ್ಕಾರಿ ಆಸ್ಪತ್ರೆಯ ಹೊಸ ಕಟ್ಟಡಕ್ಕೆ ಒದಗಿಸಲಾದ ಹಣದ ಮೊತ್ತವೆಷ್ಟು?

2. ಅದಕ್ಕೆ ಖರ್ಚಾದ ಹಣ ಎಷ್ಟು ಮತ್ತು ಈ ಕಟ್ಟಡದ ಪರಿಸ್ಥಿತಿ ಹೇಗಿದೆ?

3. ಕಟ್ಟಡ ಯಾವತ್ತು ಸಂಪೂರ್ಣ ಆಗಬೇಕಿತ್ತು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಕಾರ್ಕಳ ಸರ್ಕಾರಿ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ರೂ.118.16 ಲಕ್ಷಗಳಿಗೆ ಗುತ್ತಿಗೆಗೆ ವಹಿಸಲಾಗಿತ್ತು.

2. ಇದುವರೆವಿಗೆ ಖರ್ಚಾದ ಹಣ ರೂ.91.32 ಲಕ್ಷಗಳು. ಪ್ರಸ್ತಾವಿಸಲಾದ ಎಲ್ಲಾ ಕಟ್ಟಜಗಳ ಛಾವಣಿ ಕೆಲಸಗಳು ಮುಗಿದಿದ್ದು, ಒಳವಿದ್ಯುದ್ದೀಕರಣ, ನೀರು ಸರಬರಾಜು, ಒಳ ಮತ್ತು ಹೊರ ನೈರ್ಮಲೀಕರಣ, ನೆಲಹಾಸು ಮತ್ತು ಇತ್ಯಾದಿ ಕೆಲಸಗಳು ಬಾಕಿ ಇರುತ್ತದೆ.

3. ಗುತ್ತಿಗೆ ಕರಾರಿನ ಪ್ರಕಾರ ಕಟ್ಟಡ ಕಾಮಗಾರಿಗಳನ್ನು ದಿನಾಂಕ:6.6.2000 ದಂದು ಪೂರ್ಣಗೊಳಿಸಬೇಕಾಗಿತ್ತು. ಗುತ್ತಿಗೆದಾರರ ಮನವಿಯಂತೆ ಕೆಲಸ ಮುಗಿಸಲು ಗುತ್ತಿಗೆ ಅವಧಿಯನ್ನು 30.4.2002 ರ ತನಕ ವಿಸ್ತರಿಸಲಾಗಿತ್ತು. ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವ ಕಾರಣ ಗುತ್ತಿಗೆಯನ್ನು ರದ್ದುಪಡಿಸಿ ಬಾಕಿ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ. ಮಾರ್ಚ್-2003ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.